**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ :: 270/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : ಹೆಚ್ ಎಸ್ ನಟೇಶ | | **PW**-01 |
| **ತಂದೆಯ ಹೆಸರು** | : ಹೆಚ್ ಜಿ ಶಂಕರಪ್ಪ ಗೌಡ | | **CW**-01 |
| **ವಯಸ್ಸು** | : 59 | | |
| **ಉದ್ಯೋಗ** | : ಹೋಟೇಲ್ ಕೆಲಸ. | | |
| **ವಾಸಸ್ಥಳ** | : ಮರಿಗೆ ಬೈಲು, ನಲ್ಲೂರು ಅಂಚೆ ಶೃಂಗೇರಿ . | | |

**ದಿನಾಂಕಃ23-01-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: A.P.P ರವರಿಂದ ::**

1. ನನಗೆ ಚಾಸಾ-2 ಮತ್ತು ಚಾಸಾ-4 ರವರು ನನಗೆ ಪರಿಚಯ ಇರುವುದಿಲ್ಲ. ನಾನು ಈ ಪ್ರಕರಣದಲ್ಲಿ ನಮ್ಮ ಹೋಟೇಲ್ ನ ರೂಮ್ ನಲ್ಲಿ ಇದ್ದ ಟಿ.ವಿ ಕಳುವಾಗಿದೆ ಎಂಬ ವಿಚಾರವನ್ನು ನಮ್ಮ ಹೋಟೇಲ್ ಸಿಬ್ಬಂದಿಗಳಾದ ಚಾಸಾ-4 ರವರು ನನಗೆ ತಿಳಿಸಿದ ಮೇರೆಗೆ ನಾನು ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದೆ. ಯಾವ ದಿನಾಂಕದಂದು ನಾನು ದೂರನ್ನು ನೀಡಿದ್ದೆ ಎಂದು ನನಗೆ ಈಗ ನೆನಪಿರುವುದಿಲ್ಲ.

2. ತದನಂತರ ಪೋಲೀಸರು ಕಳುವಾಗಿದ್ದ ಟಿ.ವಿಯನ್ನು ನಮಗೆ ಹುಡುಕಿ ನ್ಯಾಯಾಲಯದ ಆದೇಶದ ಮೇರೆಗೆ ಪಡೆದುಕೊಂಡಿರುತ್ತೇವೆ. ನಾನು ಈ ಬಗ್ಗೆ ಪೋಲೀಸರಿಗೆ ಮುಂದುವರಿದು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ವಿ.ಸಿ ಮುಖಾಂತರ ಹಾಜರು ಪಡಿಸಿದ ಆರೋಪಿಯನ್ನು ನಾನು ನೋಡಿರುವುದಿಲ್ಲ.

(ಈ ಹಂತದಲ್ಲಿ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**::ಪಾಟೀಸವಾಲು :: A.P.P ರವರಿಂದ ::**

ದಿಃ20-01-2018 ರಂದು ಭಾರತೀ ಬೀದಿಯಲ್ಲಿರುವ ನನ್ನ ಮಾಲೀಕತ್ವದ ಶುಭೋದಯ ಲಾಡ್ಜ್ ನ ರೂಮ್ ನಂ.208 ರಲ್ಲಿ 1 ನೇ ಆರೋಪಿತರು ರಾತ್ರಿ 2.30 ಗಂಟೆಗೆ ಬಾಡಿಗೆಗೆ ರೂಮ್ ಪಡೆದು ಸುಮಾರು 14,000/- ಬೆಲೆಯ 24 ಇಂಚಿನ ಎಲ್.ಜಿ. ಕಂಪನಿಯ, ಎಲ್.ಇ.ಡಿ ಟಿ.ವಿಯನ್ನು ದಿಃ 21-01-2018 ರಂದು ಮಧ್ಯಾಹ್ನ

3.00 ಗಂಟೆಗೆ ಲಾಡ್ಜ್ ನಿಂದ ಸದರಿ ಆರೋಪಿತರು ಹೊರಗಡೆ ಹೋಗುವಾಗ ಕಳ್ಳತನ ಮಾಡಿರುವ ವಿಚಾರ ತಿಳಿದು ಬಂದಿರುತ್ತದೆ ಎಂದರೆ ಸರಿ. ನಾನು ಈ ಬಗ್ಗೆ ಪೋಲೀಸ್ ಠಾಣೆಯಲ್ಲಿ ದಿಃ07-02-2018 ರಂದು ಪೋಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಈ Split up ಚಾರ್ಜ್ ಶೀಟ್ ನಲ್ಲಿರುವ ಧೃಡೀಕೃತ ದೂರಿನ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಮೂಲ ಕಡತದಲ್ಲಿರುವ ದೂರಿನಲ್ಲಿರುವ ಸಹಿ ಈಗಾಗಲೇ ನಿಪಿ-1(ಎ) ಎಂದು ಗುರುತಿಸಲಾಗಿರುತ್ತದೆ ಮತ್ತೊಮ್ಮೆ ಸಾಕ್ಷಿಯ ತನ್ನ ಸಹಿಯನ್ನು ಮೂಲ ಕಡತದ ದೂರಿನಲ್ಲಿ ನೋಡಿ ಗುರುತಿಸಿರುತ್ತಾರೆ.

2. ದಿಃ 08-04-2018 ರಂದು ಆರೋಪಿತರನ್ನು ಬಾಗಲಕೋಟೆ ಪೋಲೀಸ್ ಠಾಣೆಯಿಂದ ಶೃಂಗೇರಿ ಪೋಲೀಸ್ ಠಾಣೆಗೆ ಕರೆದುಕೊಂಡು ಬಂದಾಗ ನಾನು ಸದರಿ ಆರೋಪಿತರನ್ನು ಶೃಂಗೇರಿ ಪೋಲೀಸ್ ಠಾಣೆಯಲ್ಲಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ದಿಃ08-04-2018 ರಂದು ನಾನು ಈ ಪ್ರಕರಣದಲ್ಲಿ ತನಿಖಾಧಿಕಾರಿಗಳ ಸಮಕ್ಷಮ ನನ್ನ ಮುಂದುವರಿದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಆ ಸಂದರ್ಭದಲ್ಲಿ ನಾನು ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ.K.C.C ವಕೀಲರಿಂದ ::**

ನಿಪಿ-1 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಹೇಳಿದಂತೆ ಅವರು ಬರೆದುಕೊಂಡರು ಎಂದು ನುಡಿಯುತ್ತಾರೆ. ದಿಃ20-01-2018 ರಂದು ಕಳ್ಳತನವಾಗಿದೆ ಎಂದು ಈ ಪ್ರಕರಣದಲ್ಲಿ ಹೇಳಲಾಗಿದ್ದರೂ ಸಹ ನಿಪಿ-1 ಅನ್ನು ದಿಃ07-02-2018 ರಂದು ತಡವಾಗಿ ಪೋಲೀಸ್ ಠಾಣೆಗೆ ತಿಳಿಸಲು ಕಾರಣವಿದೆಯೇ ಎಂದರೆ ಸಾಕ್ಷಿಯು ರೂಮ್ ನಲ್ಲಿ ಬಾಡಿಗೆ ಪಡೆದಿದ್ದ ವ್ಯಕ್ತಿ ಸದರಿ ರೂಮ್ ನ ಕೀಯನ್ನು ತಾನೇ ತೆಗೆದುಕೊಂಡು ಹೋಗಿದ್ದರಿಂದ ನಾವು ಅವರಿಗಾಗಿ ಕಾದೆವು ಆದ್ದರಿಂದ ತಡವಾಗಿ ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಿಪಿ-1 ರಲ್ಲಿ ನಮೂದು ಮಾಡಲು ತೊಂದರೆ ಇತ್ತೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

2. ನಮ್ಮ ಲಾಡ್ಜ್ ನಲ್ಲಿ ಕೊಠಡಿಯನ್ನು ಪಡೆದ ನಂತರ ಸದರಿ ಗ್ರಾಹಕರು ಹೇಳದೇ 2 ದಿನಗಳಿಗೂ ಹೆಚ್ಚು ಕಾಲ ಕೊಠಡಿಯನ್ನು ಮುಚ್ಚಿದ್ದರೆ ನಾವು ನಮ್ಮ ಬಳಿ ಇರುವ ಬದಲಿ ಕೀ ಮುಖಾಂತರ ಸದರಿ ಕೊಠಡಿಯನ್ನು ತೆರೆದು ಪರಿಶೀಲಿಸುತ್ತೇವೆ. ಈ ಪ್ರಕರಣದಲ್ಲಿ 208 ರ ಕೊಠಡಿಯನ್ನು ಪಡೆದುಕೊಂಡಿದ್ದ ವ್ಯಕ್ತಿಯು ತಿಳಿಸದೇ ಖಾಲಿ ಮಾಡಿಕೊಂಡ ಹೋದ ನಂತರ ಯಾವ ದಿನಾಂಕದಂದು ತೆರೆದು ಪರಿಶೀಲಿಸಿದೆವು ಎಂದು ಈಗ ನೆನಪಿರುವುದಿಲ್ಲ. ನಮ್ಮ ಲಾಡ್ಜ್ ನ ಕೊಠಡಿಯಲ್ಲಿ ಯಾವುದೇ ಟಿ.ವಿಯು ಕಳ್ಳತನ ವಾಗದೇ ಇದ್ದರೂ ನಾನು ಪೋಲೀಸರಿಗೆ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಯಾವುದೇ ಮುಂದುವರಿದ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.